ಊ) ಈಗಿರುವ ನಿಯಮಾವಳಿಗಳು ಅನಾನುಕೂಲಕರವಾಗುತ್ತಿರುವುದೆಂಬುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಋ) ಹಾಗಿದ್ದಲ್ಲಿ, ಈಗಿರುವ ನಿಯಾಮಾವಳಿಗಳನ್ನು ಬದಲಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಋೂ) ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗುವುದು (ವಿವರ ನೀಡುವುದು)?

ಡಾ. ವೈ.ನಾಗಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ದಿನಾಂಕ: 29-12-2004 ರಲ್ಲಿದ್ದಂತೆ ರಾಜ್ಯದ 69 ಇಲಾಖೆಗಳಲ್ಲಿ 13027, 10 ವಿಶ್ವವಿದ್ಯಾನಿಲಯಗಳಲ್ಲಿ 983, 63 ನಿಗಮ/ಮಂಡಳಿಗಳಲ್ಲಿ 3855 ಮತ್ತು 6 ಮಹಾನಗರ ಪಾಲಿಕೆಗಳಲ್ಲಿ 220 ಒಟ್ಟಾರೆ 18085 ಬ್ಯಾಕ್‌ಲಾಗ್ ಹುದ್ದೆಗಳು ಇವೆ.

ಆ) ಕಳೆದ ಮೂರು ವರ್ಷಗಳಲ್ಲಿ 69 ಇಲಾಖೆಗಳಲ್ಲಿ 8953, 10 ವಿಶ್ವವಿದ್ಯಾನಿಲಯಗಳಲ್ಲಿ 477, 63 ನಿಗಮ/ಮಂಡಳಿಗಳಲ್ಲಿ 2671 ಮತ್ತು 6 ಮಹಾನಗರ ಪಾಲಿಕೆಗಳಲ್ಲಿ 104 ಒಟ್ಟು 12205 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆ.

ಇ) ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯ ನಿರಂತರ ಪ್ರಕ್ರಿಯೆಯಾದ್ದರಿಂದ ಕಾಲಮಿತಿ ನಿಗದಿಗೊಳಿಸಿರುವುದಿಲ್ಲ.

ಈ) ಆದಷ್ಟು ಬೇಗ ಭರ್ತಿ ಮಾಡಲು ಕ್ರಮವಿರಿಸಿದೆ.

ಉ) ಬ್ಯಾಕ್‌ಲಾಗ್ ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮ (ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳು) (ವಿಶೇಷ ನೇಮಕಾತಿ) ನಿಯಮ 2001 ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮ (ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳು) (ವಿಶೇಷ ನೇಮಕಾತಿ) (ಮೊದಲ ತಿದ್ದುಪಡಿ) ನಿಯಮ 2002 ರಡಿ ತುಂಬಲಾಗುತ್ತಿದೆ.

ಊ) ಇಲ್ಲ.

ಋ) ಉದ್ಭವಿಸುವುದಿಲ್ಲ.

ಋೂ) ಉದ್ಭವಿಸುವುದಿಲ್ಲ.

1871(2621) ತಿಮ್ಮರಾಯಪ್ಪ ಕೆ.ಎಂ. (ಪಾವಗಡ): ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕಿನಲ್ಲಿ ಪಶು ವೈದ್ಯ ಆಸ್ಪತ್ರೆಗಳು ಯಾವುವು;

ಆ) ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು 2005-06 ರಲ್ಲಿ ತೆರೆಯುವ ಪ್ರಸ್ತಾವನೆಯಿದೆಯೇ;

ಇ) ಕೊಂಡೆತಿಮ್ಮನಹಳ್ಳಿಯಲ್ಲಿರುವ ಪಶುಚಿಕಿತ್ಸಾ ಘಟಕ 1961ರಲ್ಲಿ ಪ್ರಾರಂಭ ಆಗಿದ್ದು 44 ವರ್ಷಗಳು ಕಳೆದಿದ್ದರು ಇದುವರೆಗೆ ಮೇಲ್ದರ್ಜೆಗೆ ಏರಿಸಿಲ್ಲದಿರುವುದಕ್ಕೆ ಕಾರಣವೇನು;

ಈ) 2005-06ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಮೆರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಪಾವಗಡ ತಾಲ್ಲೂಕು ಕೇಂದ್ರದಲ್ಲಿ ಒಂದು ಪಶು ಆಸ್ಪತ್ರೆ ಹಾಗೂ ಒಂದು ಸಂಚಾರಿ ಪಶುಚಿಕಿತ್ಸಾಲಯ ಇದೆ. ತಾಲ್ಲೂಕಿನ ಇತರೆ ಪಶುವೈದ್ಯಕೀಯ ಸಂಸ್ಥೆಗಳು ಈ ರೀತಿ ಇವೆ:

ಪಶು ಚಿಕಿತ್ಸಾಲಯ	ಪ್ರಾಪಚಿ ಕೇಂದ್ರಗಳು	ಕೃತಕ ಗರ್ಭಧಾರಣಾ ಕೇಂದ್ರಗಳು
1. Y.N.ಹೊಸಕೋಟೆ	1. ಕೊಂಡೆತಿಮ್ಮನಹಳ್ಳಿ	1. ಪೊನ್ನಸಂದ್ರ
2. ಲಿಂಗದಹಳ್ಳಿ	2. ವೆಂಕಟಾಪುರ	2. ವೆಂಕಟಮ್ಮನ ಹಳ್ಳಿ
3. ಅರಸೀಕೆರೆ	3. ಕೊಟೆಗುಡ್ಡ	
4. ನಾಗಲಮಡಿಕೆ	4. ಪಳವಳ್ಳಿ	
5. ಸಿ.ಕೆ.ಪುರ	5. ತಿರುಮಣಿ	
	6. ಬಿ.ಕೆ.ಹಳ್ಳಿ	
	7. ಮರಿದಾಸನಹಳ್ಳಿ	
	8. ಗುಮ್ಮಘಟ್ಟ	

ಆ) ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಕಾರ್ಯಕ್ರಮ ಇರುವುದಿಲ್ಲ. ಆದಾಗ್ಯೂ ಡಾ: ನಂಜುಂಡಪ್ಪ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನಂತೆ ಎಲ್ಲಿ ಪಶುವೈದ್ಯಕೀಯ ಸಂಸ್ಥೆಗಳು ಜಾನುವಾರು ಸಂಖ್ಯೆಗೆ ಅನುಸಾರವಾಗಿ ಕಡಿಮೆ ಇರುವುದೋ ಅಂತಹ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಸಂಸ್ಥೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಇ) ಹಾಲಿ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಹಂತ ಹಂತವಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಮಾತ್ರ ಇರುತ್ತದೆ.

ಈ) ಅರ್ಹತೆ ಆಧಾರದ ಮೇಲೆ ಪರಿಶೀಲಿಸಲಾಗುವುದು.

1872(2622) ಶ್ರೀ ಕೆ.ಎಮ್. ತಿಮ್ಮರಾಯಪ್ಪ(ಪಾವಗಡ): ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಆ) ಹಾಗಿದ್ದಲ್ಲಿ ಪಾವಗಡ ತಾಲ್ಲೂಕಿನಲ್ಲಿ ಎಷ್ಟು ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಸರ್ಕಾರ ಸಹಾಯಧನ ನೀಡಿದೆ?

ಇ) ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪಾವಗಡ ತಾಲ್ಲೂಕನ್ನು ವಿಶೇಷವಾಗಿ ಏನಾದರೂ ಪರಿಗಣಿಸುವುದೇ

ಅ) 1. ಅತಿ ಸಣ್ಣ ಕೈಗಾರಿಕೆಗಳು ಹೂಡಿದ ಒಟ್ಟು ಸ್ಥಿರ ಬಂಡವಾಳದ ಮೇಲೆ ವಲಯ ಬಿ ಯಲ್ಲಿ ಬರುವ ತಾಲ್ಲೂಕುಗಳಲ್ಲಿ ಶೇ.10 ರಷ್ಟು ಗರಿಷ್ಠ ರೂ.5 ಲಕ್ಷ ಮತ್ತು ವಲಯ ಸಿ ಯಲ್ಲಿ ಬರುವ ತಾಲ್ಲೂಕುಗಳಲ್ಲಿ ಶೇ.20 ರಷ್ಟು ಗರಿಷ್ಠ ರೂ.10 ಲಕ್ಷ ಬಂಡವಾಳ ಸಹಾಯಧನ ನೀಡಲಾಗುವುದು. ವಲಯ ಡಿ ಯಡಿಯಲ್ಲಿ ಬರುವ ತಾಲ್ಲೂಕುಗಳಲ್ಲಿ ಶೇ.25 ರಷ್ಟು ಗರಿಷ್ಠ ರೂ.12.50 ಲಕ್ಷ ಬಂಡವಾಳ ಸಹಾಯಧನ ನೀಡಲಾಗುವುದು.